ಮೂ.ದಾ. 252/2015

ಪಿ.ಡಬ್ಲ್ಯೂ-6

**ಸಾಕ್ಷಿಯನ್ನು ಇಂದು ದಿನಾಂಕಃ 10-02-2020 ರಂದು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಆರ್.ಜೆ.ಪಿ. ವಕೀಲರಿಂದ.**

ನನಗೆ ಈಗ 44 ವರ್ಷ ವಯಸ್ಸು. ನನಗೆ 1981 ರಲ್ಲಿ ಎಷ್ಟು ವರ್ಷ ವಯಸ್ಸಾಗಿತ್ತು ಗೊತ್ತಿಲ್ಲ. ವಾದಿ ನನ್ನ ಖಾಸಾ ಅಣ್ಣ, ನಾವು 5 ಜನ ಅಣ್ಣ-ತಮ್ಮಂದಿರು. ನಮ್ಮ ತಂದೆ ಮತ್ತು ನನ್ನ ಚಿಕ್ಕಪ್ಪ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಯಾವ ಯಾವ ವ್ಯವಹಾರ ಮಾಡಿದ್ದರು ನನಗೆ ಗೊತ್ತಿಲ್ಲ, ಅವರು ಯಾರಿಗೆ ಮಾರಾಟ ಮಾಡಿದ್ದರು ಹಾಗೂ ದಾವಾ ಸ್ವತ್ತನ್ನು ಯಾರಿಗೆ ಕೊಟ್ಟಿದ್ದರು ನನಗೆ ಗೊತ್ತಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿ ನನಗೆ 20 ವರ್ಷಗಳಿಂದ ಪರಿಚಯ. ಆತ ಒಕ್ಕಲುತನ ಮಾಡುತ್ತಿದ್ದ. ಆತ ತನ್ನ ಹೊಲದಲ್ಲಿ ಒಕ್ಕಲುತನ ಮಾಡುತ್ತಿದ್ದ. ಆತ ನಮ್ಮ ಮನೆಯಲ್ಲಿ ಮತ್ತು ನಮ್ಮ ಚಿಕ್ಕಪ್ಪನ ಮನೆಯಲ್ಲಿ ಕೆಲಸ ಮಾಡಲು ಬರುತ್ತಿದ್ದ ಎಂದರೆ

ಸರಿ. 2015 ರಲ್ಲಿ ದಾವಾ ಆಸ್ತಿ 2 ನೇ ಪ್ರತಿವಾದಿ ಹೆಸರಿಗೆ ಆಗಿದೆ, ಆ ಮುಂಚೆ ಅದು ನನ್ನ ಅಣ್ಣನ ಹೆಸರಿನಲ್ಲಿತ್ತು. 2 ನೇ ಪ್ರತಿವಾದಿ ದಾವಾ ಸ್ವತ್ತಿನ ಮೇಲೆ ಬ್ಯಾಂಕಿನಿಂದ ಸಾಲವನ್ನು ಪಡೆದಿರುತ್ತಾನೆ ಎಂಥರೆ ಸರಿ ಅಲ್ಲ. 2 ನೇ ಪ್ರತಿವಾದಿ ನಮ್ಮ ಮತ್ತು ನಮ್ಮ ಚಿಕ್ಕಪ್ಪನ ಮನೆ ಮತ್ತು ಹೊಲದಲ್ಲಿ ಕೆಲಸ ಮಾಡುತ್ತಿದ್ದ, ತನಗೆ ದಾವಾ ಸ್ವತ್ತನ್ನು ನೀಡಬೇಕೆಂದು ನನ್ನ ತಂದೆ ಮತ್ತು ಚಿಕ್ಕಪ್ಪನಲ್ಲಿ ಕೋರಿದ್ದ ಎಂದರೆ ಸರಿ ಅಲ್ಲ. ಹೀಗೆ ತಾನು ಯಾವುದೇ ಸಂಬಳ ಇಲ್ಲದೇ ಕೆಲಸ ಮಾಡುತ್ತಿದ್ದರಿಂದ ತನಗೆ ದಾವಾ ಆಸ್ತಿಯನ್ನು ನೀಡಬೇಕೆಂದು ಕೋರಿದ್ದು 1999 ರಲ್ಲಿ ರೂ:90/- ಗಳ ಟೋಕನ್ ಮೊಬಲಗನ್ನು ಪಡೆದು ಪಂಚರ ಸಮಕ್ಷಮ ದಾವಾ ಸ್ವತ್ತನ್ನು 2 ನೇ ಪ್ರತಿವಾದಿ ಖರೀದಿಸಿರುತ್ತಾನೆ ಎಂಥರೆ ಸರಿ ಅಲ್ಲ. ಆ ಪ್ರಕಾರ ನನ್ನ ತಂದೆ ಮತ್ತು ಚಿಕ್ಕಪ್ಪ ದಾವಾ ಸ್ವತ್ತನ್ನು 2 ನೇ ಪ್ರತಿವಾದಿ ಹೆಸರಿ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿ ಅಲ್ಲ.

2 ನೇ ಪ್ರತಿವಾದಿ ದಾವಾ ಸ್ವತ್ತಿನ ಮಾಲೀಕನಾಗಿದ್ದು ಅದರಂತೆ ಅವನು 1 ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿದ್ದ ಎಂಥರೆ ಸರಿ ಅಲ್ಲ. ಆ ಪ್ರಕಾರ 1 ನೇ ಪ್ರತಿವಾದಿ ದಾವಾ ಸ್ವತ್ತಿನ ಮಾಲೀಕ ಮತ್ತು ಸ್ವಾಧೀನದಾರ ಆಗಿರುತ್ತಾನೆ ಎಂದರೆ ಸರಿ ಅಲ್ಲ. ವಾದಿಗೂ ಮತ್ತು ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ ಅಲ್ಲ. ಸ.ನಂ. 89 ರಲ್ಲಿನ 2 ಎ-30 ಗುಂಟೆ ಇನ್ನೊಂದು ಜಮೀನು 1 ನೇ ಪ್ರತಿವಾದಿಯ ಹೆಸರಿಗಿದೆ. ಆ ಸ.ನಂ. ಬಗ್ಗೆ ನನಗೆ ಏನೂ ಮಾಹಿತಿ ಇಲ್ಲ. ಸದರಿ ಸ.ನಂ. 89 ರಲ್ಲಿನ 2 ಎ-30 ಗುಂಟೆ ಉಳ್ಳ ಇನ್ನೊಂದು ಜಮೀನು ನನ್ನ ಚಿಕ್ಕಪ್ಪ 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ತಂಧೆಯವರಿಗೆ ಒಟ್ಟು 15 ಎಕರೆ ಜಮೀನು ಇತ್ತು. ಈಗಲೂ ಅಷ್ಟೇ ಇದೆ. ನಾವು ಸ.ನಂ. 89 ರಲ್ಲಿನ 2 ಎ-30 ಗುಂಟೆ ಇನ್ನೊಂದು ಜಮೀನಿಗೆ ಸಂಬಂಧಪಟ್ಟಂತೆ ಯಾವ ರೀತಿ ಪ್ರಶ್ನೆ ಮಾಡಿಲ್ಲ ಎಂಥರೆ ಸರಿ. ಸದರಿ 2 ಎ-30 ಗುಂಟೆ ಜಮೀನನ್ನು ಪ್ರಶ್ನಿಸಬೇಕೆಂದು ನಮಗೇನು ಅನಿಸಿಲ್ಲ. ವಾದಿಗೆ ಸಹಾಯ ಮಾಡಬೇಕೆಂದ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ.

**ಮರುವಿಚಾರಣೆ**:ಇರುವುದಿಲ್ಲ.

ಓ.ಹೇ.ಕೆ.ಸರಿ.ಇದೆ.

ಅಪರ ಸಿವಿಲ್ ನ್ಯಾಯಾಧೀಶರು
ಆಳಂದ.

ಮೂ.ದಾ. 252/2015
ಪಿ.ಡಬ್ಲ್ಯೂ-5

**ಸಾಕ್ಷಿಯನ್ನು ಇಂದು ದಿನಾಂಕಃ 10-02-2020 ರಂದು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಆರ್.ಜೆ.ಪಿ. ವಕೀಲರಿಂದ.**

ನನಗೆ ಈಗ 35 ವರ್ಷ ವಯಸ್ಸು. ನಾನು 1981 ರಲ್ಲಿ ಹುಟ್ಟಿರಲಿಲ್ಲ. ನನಗೆ 2 ನೇ ಪ್ರತಿವಾದಿ ಕಳೆದ 20 ವರ್ಷಗಳಿಂದ ಪರಿಚಯ. 2 ನೇ ಪ್ರತಿವಾದಿ ಒಕ್ಕಲುತನ ಮಾಡುತ್ತಾರೆ, ಅವರು ಅವರ ಹೊಲದಲ್ಲಿಯೇ ಒಕ್ಕಲುತನ ಮಾಡುತ್ತಾರೆ. 2 ನೇ ಪ್ರತಿವಾದಿ ನಮ್ಮ ದೊಡ್ಡಪ್ಪ ಮತ್ತು ನಮ್ಮ ಮನೆಯಲ್ಲಿ, ಹೊಲದಲ್ಲಿ ಕೆಲಸ ಮಾಡುತ್ತಿದ್ದರು ಎಂಧರೆ ಹಣ ಪಡೆದು ಕೆಲಸ ಮಾಡುತ್ತಿದ್ದರು. ಕಳೆದ 20 ವರ್ಷಗಳಿಂದ ಆತ ನಮ್ಮ ಮತ್ತು ನಮ್ಮ ಚಿಕ್ಕಪ್ಪನ ಮನೆ ಮತ್ತು ಹೊಲದಲ್ಲಿ ಕೆಲಸ ಮಾಡುತ್ತಿದ್ದ. ನನ್ನ ಚಿಕ್ಕಪ್ಪನಿಗೆ ಸೇರಿದ ಸ.ನಂ. 89 ನ್ನು 2 ನೇ ಪ್ರತಿವಾದಿಗೆ ನೊಂದಣಿ ಮಾಡಿಕೊಡಲಾಗಿದೆ ಎಂಧರೆ ಸರಿ. 2 ನೇ ಪ್ರತಿವಾದಿ ನಮ್ಮ ಹೊಲ ಮತ್ತು ಮನೆಯಲ್ಲಿ

ಕೆಲಸ ಮಾಡುತ್ತಿದ್ದರಿಂದ ಸಾಕ್ಷಿಗಳ ಸಮಕ್ಷಮ ನಮಗೆ ದಾವಾ ಸ್ವತ್ತನ್ನು ನೀಡುವಂತೆ ಕೋರಿದ್ದ ಎಂದರೆ ಸರಿ ಅಲ್ಲ. ಆತನ ಕೋರಿಕೆಯಂತೆ ನಮ್ಮ ತಂದೆ ಮತ್ತು ಚಿಕ್ಕಪ್ಪ ದಾವಾ ಸ್ವತ್ತನ್ನು ಆತನಿಗೆ ನೀಡಿರುತ್ತಾರೆ ಎಂಧರೆ ಸರಿ ಅಲ್ಲ. ಪಂಚರ ಹೇಳಿಕೆಯಂತೆ ಉಚಿತವಾಗಿ ಪಡೆಯಬಾರದೆಂದು ರೂ:90/- ಗಳ ಟೋಕನ್ ಮೊಬಲಗಿಗೆ ದಾವಾ ಸ್ವತ್ತನ್ನು 2 ನೇ ಪ್ರತಿವಾದಿ ಖರಿದಿಸಿರುತ್ತಾನೆ ಎಂದರೆ ಸರಿ ಅಲ್ಲ. ಆ ಪ್ರಕಾರ ದಾವಾ ಸ್ವತನ್ನು 2 ನೇ ಪ್ರತಿವಾದಿ ಹೆಸರಿಗೆ ವರ್ಗಾವಣೆ ಸಹ ಆಗಿರುತ್ತದೆ ಎಂಧರೆ ಸರಿ ಅಲ್ಲ.

1999 ರಿಂದ 2 ನೇ ಪ್ರತಿವಾದಿಯೇ ದಾವಾ ಸ್ವತ್ತಿನ ಮಾಲೀಕನಾಗಿದ್ದು 1 ನೇ ಪ್ರತಿವಾದಿಗೆ 2015 ರಲ್ಲಿ ಮಾರಾಟ ಮಾಡಿರುತ್ತಾರೆ ಎಂಧರೆ ಸರಿ ಅಲ್ಲ. ಆ ಪ್ರಕಾರ 1 ನೇ ಪ್ರತಿವಾದಿಯೇ ದಾವಾ ಸ್ವತ್ತಿನ ಮಾಲೀಕನಾಗಿದ್ದು, ಆತನೇ ಸ್ವಾಧೀನದಲ್ಲಿದ್ದಾನೆ ಎಂಧರೆ ಸರಿ ಅಲ್ಲ. ವಾದಿಯೇ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದಾನೆ ಎಂದು ನಾನು ಹೇಳುತ್ತಿರುವುದು ಸುಳ್ಳು ಎಂಧರೆ ಸರಿ ಅಲ್ಲ. ವಾದಿಗೂ ದಾವಾ ಸ್ವತ್ತಿಗೂ ಸಂಬಂಧ ಇಲ್ಲ ಎಂಧರೆ ಸರಿ ಅಲ್ಲ. ವಾದಿ ನನ್ನ ಸಹೋದರನಾಗಬೇಕಾಗಿರುವುದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಮರುವಿಚಾರಣೆ**:ಇರುವುದಿಲ್ಲ.

**ಓ.ಹೇ.ಕೆ.ಸರಿ.ಇದೆ.**

ಅಪರ ಸಿವಿಲ್ ನ್ಯಾಯಾಧೀಶರು
ಆಳಂದ.

ಮೂ.ದಾ. 252/2015

ಪಿ.ಡಬ್ಲ್ಯೂ-4

**ಸಾಕ್ಷಿಯನ್ನು ಇಂದು ದಿನಾಂಕಃ 10-02-2020 ರಂದು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಆರ್.ಜೆ.ಪಿ. ವಕೀಲರಿಂದ.**

ನನಗೆ ಈಗ 45 ವರ್ಷ, 1981 ರಲ್ಲಿ ನನಗೆ ಎಷ್ಟು ವರ್ಷ ಇತ್ತು ನನಗೆ ಗೊತ್ತಾಗುವುದಿಲ್ಲ. ನನಗೆ 40 ವರ್ಷಗಳ ಹಿಂದೆ 5-6 ವರ್ಷ ಇದ್ದಿರಬಹುದು ಎಂದರೆ ಸರಿ. ನನಗೆ ಈ ದಿನ ವಾದಿ ಕರೆತಂದಿದ್ದಾರೆ ಎಂದರೆ ಸರಿ, ವಾದಿಯ ತಂದೆಯ ಹೆಸರು ಶರಣಪ್ಪ. ಶರಣಪ್ಪ ಮತ್ತು ಸಿದ್ದಪ್ಪ ಅಣ್ಣ-ತಮ್ಮಂದಿರು. ಶರಣಪ್ಪ ಮತ್ತು ಸಿದ್ದಪ್ಪನಿಗೆ ನಾನು ನೋಡಿದ್ದೇನೆ. ಅವರ ಪೈಕಿ ನಮ್ಮ ತಂದೆ ಶರಣಪ್ಪ ತೀರಿದ್ದಾರೆ. 2 ನೇ ಪ್ರತಿವಾದಿ ನನಗೆ ಗೊತ್ತು. ಅವರಿಗೆ ಈಗ 50 ವರ್ಷ ಇರಬಹುದು. ನಾನು ಚಿಕ್ಕವನಿದ್ದಾಗಿಂದಲೂ 2 ನೇ ಪ್ರತಿವಾದಿ ಪರಿಚಯ. ಅವರು ಹರಿಜನರು. ಅವರು ಒಕ್ಕಲುತನ ಮಾಡುತ್ತಾರೆ. ಶರಣಪ್ಪ ಮತ್ತು ಸಿದ್ದಪ್ಪನವರಿಗೆ ಒಟ್ಟಾಗಿ 1 ಎ-17 ಗುಂಟೆ ಜಮೀನು ಇತ್ತು, ಅದರ ಸ.ನಂ. 9 ಇದೆ. ಈ ಜಮೀನು ಬಿಟ್ಟು ಶರಣಪ್ಪ ಮತ್ತು ಸಿದ್ದಪ್ಪನವರಿಗೆ

ಬೇರೆ ಯಾವ ಜಮೀನು ಇರಲಿಲ್ಲ. ಹಾಲಿ ಸದರಿ ಜಮೀನು ವಾದಿಯ ಹೆಸರಿಗಿದೆ. ಸ.ನಂ.89/2, ರಲ್ಲಿನ 2 ಎ-30 ಗುಂಟೆ ಜಮೀನು ನಮ್ಮ ತಂದೆ ಶರಣಪ್ಪ 1981 ರಲ್ಲಿ 2 ನೇ ಪ್ರತಿವಾದಿಗೆ ಮಾರಿದ್ದಾರೆ ಎಂದರೆ ಸರಿ ಅಲ್ಲ.

2 ನೇ ಪ್ರತಿವಾದಿ ತಾನು ಚಿಕ್ಕವನಿದ್ದಾಗಿಂದಲೂ ನಮ್ಮ ಹೊಲ ಮತ್ತು ಮನೆಯಲ್ಲಿ ಕೆಲಸ ಮಾಡುತ್ತಿದ್ದ ಎಂದರೆ, ಆತ ತಿಂಗಳಿಗೊಮ್ಮೆ ಎರಡು ತಿಂಗಳಿಗೊಮ್ಮೆ ಕೆಲಸಕ್ಕೆ ಬರುತ್ತಿದ್ದ. 2 ನೇ ಪ್ರತಿವಾದಿ ನಮ್ಮ ಹೊಲ ಮತ್ತು ಮನೆಯಲ್ಲಿ ಕೆಲಸ ಮಾಡುತ್ತಿದ್ದ ಆತನಿಗೆ ಸಂಬಳ ವಗೈರೆ ಏನು ಕೊಡುತ್ತಿರಲಿಲ್ಲ ಎಂದರೆ ಸರಿ ಅಲ್ಲ. 1981 ರಲ್ಲಿ ನಮ್ಮ ತಂದೆ ಮತ್ತು ಚಿಕ್ಕಪ್ಪ ಇಬ್ಬರೂ ಸೇರಿ ಸ.ನಂ.89/2 ನ್ನು 2 ನೇ ಪ್ರತಿವಾದಿಗೆ ಕ್ರಯ ಮಾಡಿರುತ್ತಾರೆ ಎಂದರೆ ಸರಿ ಅಲ್ಲ. ಆ ಪ್ರಕಾರ ಆತನಿಗೆ ಸ್ವಾಧೀನ ಸಹ ನೀಡಿರುತ್ತಾರೆ ಎಂದರೆ ಸರಿ ಅಲ್ಲ. 2 ನೇ ಪ್ರತಿವಾದಿಯು 1982 ರಲ್ಲಿ ನಾನು ನಿಮ್ಮ ಮನೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ನನಗೆ ಸ್ವಲ್ಪ ಜಮೀನನ್ನು ನೀಡಿ ಎಂದು ಶಾಂತಪ್ಪ ಕಲ್ಲಪ್ಪಾ ಉದ್ದನಶೆಟ್ಟಿ ಮತ್ತು ಅಂಬಾರಾಯ ಶರಣಪ್ಪ, ಮತ್ತು ಹಣಮಂತ ತಂದೆ ಶರಣಪ್ಪ ಇವರ ಸಮಕ್ಷಮ ಕೇಳಿರುತ್ತಾರೆ ಎಂದರೆ ಸರಿ ಅಲ್ಲ. ಆತ ಹೀಗೆ ಕೇಳಿದಾಗ ನನ್ನ ತಂದೆ ಮತ್ತು ಚಿಕ್ಕಪ್ಪ ಅದಕ್ಕೆ ಒಪ್ಪಿರುತ್ತಾರೆ ಎಂದರೆ ಸರಿ ಅಲ್ಲ. ಹೀಗೆ ಟೋಕನ್ ಮೊಬಲಗಾಗಿ ರೂ:90/- ಗಳನ್ನು ಪಾವತಿಸಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ ಅಲ್ಲ. ಅದರಂತೆ 2 ನೇ ಪ್ರತಿವಾದಿಗೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿ ಅಲ್ಲ. ಆ ಪ್ರಕಾರವಾಗಿ 2 ನೇ ಪ್ರತಿವಾದಿ ಸದರಿ ಜಮೀನಿನ ಮೇಲೆ ಬ್ಯಾಂಕ್ ಸಾಲವನ್ನು ಪಡೆದಿದ್ದ ಎಂದರೆ ಸರಿ ಅಲ್ಲ.

ಆ ಪ್ರಕಾರ 2 ನೇ ಪ್ರತಿವಾದಿ ತನ್ನ ಮಾಲೀಕತ್ವದ ಸ್ವತ್ತನ್ನು 1 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿ ಅಲ್ಲ. ಆ ಪ್ರಕಾರವಾಗಿ ದಾವಾ ಸ್ವತ್ತು 1 ನೇ ಪ್ರತಿವಾದಿಯ ಮಾಲೀಕತ್ವದಲ್ಲಿದ್ದು ಅವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ ಅಲ್ಲ. ನನ್ನ ಸಹೋದರನೇ ಮಾಲೀಕನಾಗಿದ್ದಾನೆ. ನನಗೆ ಈ ಎಲ್ಲದರ ಬಗ್ಗೆ ತಿಳಿದಿದ್ದರೂ ಸಹ ವಾದಿ ನನ್ನ ಅಣ್ಣನಾಗಿರುವುದರಿಂದ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. 1981 ರಲ್ಲಿ 2 ನೇ ಪ್ರತಿವಾದಿ ಸ.ನಂ.89/ಸಿ ಯನ್ನು ಸಿದ್ದಪ್ಪನವರಿಂದ ಖರೀದಿಸಿರುವ ಬಗ್ಗೆ ನನಗೆ ಗೊತ್ತಿದೆ ಎಂಧರೆ ಸರಿ ಅಲ್ಲ. ದಾವಾ ಜಮೀನಿಗೂ ವಾದಿಗೂ ಯಾವುದೇ ಸಂಬಂಧ ಇಲ್ಲ ಎಂಧರೆ ಸರಿ ಅಲ್ಲ. ದಾವಾ ಸ್ವತ್ತು 2 ನೇ ಪ್ರತಿವಾದಿಗೆ ಸಂಬಂಧಪಟ್ಟಿದ್ದು, ಈಗ 1 ನೇ ಪ್ರತಿವಾದಿ ಮಾಲೀಕರಾಗಿರುತ್ತಾರೆ ಎಂಧರೆ ಸರಿ ಅಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಮರುವಿಚಾರಣೆ**:ಇರುವುದಿಲ್ಲ.

**ಓ.ಹೇ.ಕೆ.ಸರಿ.ಇದೆ.**

ಅಪರ ಸಿವಿಲ್ ನ್ಯಾಯಾಧೀಶರು
**ಆಳಂದ.**